ವಿಷಯ:- ಹುಬ್ಬಳ್ಳಿಯಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ.

1354 (2125) ಶ್ರೀ ಅಶೋಕ್ ಎಸ್. ಕಾಟ್‌ವೆ (ಹುಬ್ಬಳ್ಳಿ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿಯಲ್ಲಿ 1994-95, 1995-96ರಲ್ಲಿ ಎಷ್ಟು ಕಟ್ಟಡಗಳು ಅನುಮತಿ ಪಡೆದುಕೊಂಡು ನಿರ್ಮಾಣವಾಗಿವೆ. ಇದರಿಂದ ಮಹಾನಗರ ಪಾಲಿಕೆಗೆ ಎಷ್ಟು ಆದಾಯ ಬಂದಿದೆ. ಅನಧಿಕೃತವಾಗಿ ಎಷ್ಟು ಕಟ್ಟಡಗಳು ನಿರ್ಮಾಣಗೊಂಡಿವೆ, ಹಾಗೂ ಈ ಬಗ್ಗೆ ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆಯವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) 1994-95ರಲ್ಲಿ 827 ಕಟ್ಟಡಗಳಿಗೆ ಹಾಗೂ 1995-96ರಲ್ಲಿ 928 ಕಟ್ಟಡಗಳಿಗೆ ಅನುಮತಿ ನೀಡಲಾಗಿದೆ. ಇದರಿಂದಾಗಿ ಒಟ್ಟು ರೂ. 66,79,833-00ಗಳ ಆದಾಯ ಬಂದಿದೆ.

1-1-95ರವರೆಗೆ ಒಟ್ಟು 2826 ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಬಗ್ಗೆ ಅರ್ಜಿಗಳು ಬಂದಿದ್ದು, ಇನ್ನುಳಿದ ಅನಧಿಕೃತ ಕಟ್ಟಡಗಳ ಸಮೀಕ್ಷಣಾ ಕಾರ್ಯ ನಡೆಸಿದ್ದು, ಕೆ.ಎಂ.ಸಿ. ಕಾಯ್ದೆ 1976, ಕಲಂ 321ರ ಅನುಗುಣವಾಗಿ ನೋಟಿಸ್ ಜಾರಿ ಮಾಡಿ ಕಾಯ್ದೆಗೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಷಯ:- ಹುಬ್ಬಳ್ಳಿ–ಧಾರವಾಡ ಗಟಾರಗಳಿಗಾಗಿ ಖರ್ಚು ಮಾಡಿದ ಫಿನಾಯಿಲ್‌ನ ವಿವರ.

1355 (2124) ಶ್ರೀ ಅಶೋಕ್ ಎಸ್. ಕಾಟ್‌ವೆ (ಹುಬ್ಬಳ್ಳಿ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994-95 ಮತ್ತು 95-96 ರಲ್ಲಿ ಹುಬ್ಬಳ್ಳಿ–ಧಾರವಾಡ ನಗರಗಳ ಗಟಾರಕ್ಕೆ ಹಾಕಿದ ಫಿನಾ–ಯಿಲ್ ಖರ್ಚು ಎಷ್ಟು? ಈ ಬಗ್ಗೆ ಕ್ಷೇತ್ರವಾರು ಬಡಾವಣೆವಾರು ವಿವರ ನೀಡುವುದು?

ಆ) ಫಿನಾಯಿಲ್ ಕಳೆದ ಐದಾರು ವರ್ಷಗಳಿಂದ ಗಟಾರುಗಳಿಗೆ ಹಾಕದೆ ಇರುವುದರ ಬಗ್ಗೆ [illegible]ರಕ್ಕೆ ಜನ ಪ್ರತಿನಿಧಿಗಳು ಜನತಾ ಸಂಘ ಸಂಸ್ಥೆಗಳು, ಮನವಿ ಮಾಡಿದಾಗ್ಯೂ ಪ್ರಯೋಜನ–ವಾಗದೆ ಇರುವುದಕ್ಕೆ ಕಾರಣಗಳು ಏನು?

ಶ್ರೀ ಮಿರಾಜುದ್ದಿನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) 1994-95 ರಲ್ಲಿ ರೂ. 37, 240-00

1994-95 ರಲ್ಲಿ ರೂ. 32, 060-00

ವಿವರ ಲಗತ್ತಿಸಿದೆ.

ಆ) ಫಿನಾಯಿಲ್‌ನ್ನು ಗಟಾರುಗಳಿಗೆ ಹಾಕಲಾಗುವುದಿಲ್ಲ ಈ ಕ್ರಿಮಿ ನಾಶಕವನ್ನು ಸಾರ್ವಜನಿಕ ಮೂತ್ರ ಹಾಗೂ ಪಾಯಖಾನೆಗಳಿಗೆ ಮಾತ್ರ ಹಾಕಲಾಗುವುದು ಮತ್ತು ಅತೀಸಾರ ಬೇನೆ ಹಾಗು

ಕಾಲರಾ ಬಂದಾಗ ಅಂಥಹ ಮನೆ ಹಾಗು ಅಜುಬಾಜು ಮನೆಗಳಿಗೆ ಮಾತ್ರ ಫಿನಾಯಿಲ್‌ನ್ನು ಸಿಂಪರಣೆ ಮಾಡಲಾಗುವುದು. ಬೇವಾರ್ಸಿ ಹೆಣಗಳು ಬಂದಾಗ ಅಂತಹ ಹೆಣಗಳಿಗೆ ಕ್ರಿಮಿನಾಶಕವನ್ನು ಸಿಂಪರಣೆ ಮಾಡಲಾಗುವುದು ಹಾಗೂ ಸತ್ತ ಪ್ರಾಣಿಗಳ ದುರ್ವಾಸನೆ ಬಂದಾಗ ಅಂತಹ ಸ್ಥಳಗಳಲ್ಲಿ ಮಾತ್ರ ಸಿಂಪರಣೆ ಮಾಡಲಾಗುವುದು.

**ವಿಷಯ:- ರೇಷ್ಮೆ ಇಲಾಖೆಯಿಂದ ಕೈಗೊಂಡಿರುವ ಮೂಲಭೂತ ಸೌಕರ್ಯಗಳು.**

1356 (1095) **ಶ್ರೀ. ಬಸವಗೌಡ. ರಾ. ಪಾಟೀಲ್ (ವಿಜಾಪುರ):-** ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಗಾರರಿಗೆ ನೀಡಲಾಗಿರುವ ಸೌಲಭ್ಯಗಳೇನು? ಫಲಾನುಭವಿಗಳ ಹೆಸರು, ನೀಡಲಾದ ಸಹಾಯದ ತಾಲ್ಲೂಕುವಾರು ವಿವರ ನೀಡುವುದು?

ಆ) ವಿಜಾಪುರ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜನಾಂಗದವರಿಗೆ ನೀಡಲಾಗಿರುವ ಸೌಲಭ್ಯಗಳು ಹಾಗೂ ಸಹಾಯಧನದ ವಿವರ ನೀಡುವುದು. (ಫಲಾನುಭವಿಗಳ ಯಾದಿ ಸಹಿತ)

**ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು.)**

**ಅ) ನೀಡಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತೆ ಇರುತ್ತೆ.**

1) ಹಿಪ್ಪುನೇರಳೆ ತೋಟದ ಪ್ರಾತ್ಯಕ್ಷತೆ.

2) ರೇಷ್ಮೆ ನೂಲು ಬಿಚ್ಚಾಣಿಕೆ ಪ್ರಾತ್ಯಕ್ಷತೆ.

3) ರೇಷ್ಮೆ ಹುಳು ಸಾಕಾಣಿಕೆ ಮನೆ ಕಟ್ಟಲು ಶೇಕಡ 25 ಭಾಗ ಸಹಾಯಧನ.

4) ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ರೇಷ್ಮೆ ಬೆಳೆಗಾರರಿಗೆ ಸೋಂಕು ನಿವಾರಣೆ ಕೈಗೊಳ್ಳಲು ಫಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪೌಡರ್, ರೇಷ್ಮೆ ಕೀಟ ಔಷಧ, ಮೇಣದ ಕಾಗದ, ಫೋಂ ರಬ್ಬರ್ ಮುಂತಾದವುಗಳನ್ನು ಸಾಮೂಹಿಕವಾಗಿ ನೀಡಲಾಗುತ್ತದೆ.

ಫಲಾನುಭವಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

**ಆ) ವಿಶೇಷ ಘಟಕ ಯೋಜನೆ**

1) ರೇಷ್ಮೆ ಹುಳು ಸಾಕಣೆ ಮನೆ ನಿರ್ಮಾಣಕ್ಕೆ ಶೇಕಡ 60 ಭಾಗ ಸಹಾಯಧನ.

2) ಪ್ರೋಗ್ರಾಂ ಆಫ್ ಪ್ಯಾಕೇಜ್ ಬೆನಿಫಿಟ್ಸ್.

**ಗಿರಿಜನ ಉಪಯೋಜನೆ**

1) ಪ್ರೋಗ್ರಾಂ ಆಫ್ ಪ್ಯಾಕೇಜ್ ಬೆನಿಫಿಟ್ಸ್.

2) ನೀರಾವರಿ ಬಾವಿಗೆ ಸಹಾಯಧನ.

ಫಲಾನುಭವಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.